ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 98-102
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಡಿ.ಎಸ್. ವೀರಯ್ಯ ಅವರ ಕಾವ್ಯಗಳಲ್ಲಿ ಸಾಮಾಜಿಕ ಸಮಸ್ಯೆಗಳ ಪರಿಹಾರ

**ರೇಷ್ಮಾವತಿ ರಾಮಚಂದ್ರ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

***Abstract:***
*ಸಾಹಿತ್ಯ ಸಂದರ್ಭದಲ್ಲಿ ಬಹು ಹಿಂದಯೇ ಕನ್ನಡದ ಆದಿಕವಿ ಪಂಪ ಸಾರಿದ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ನುಡಿ ಬಸವಣ್ಣನವರ "ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ" ಎಂಬ ಮಾತು. ನಡೆಯುವುದೊಂದೇ ಭೂಮಿ, ಕುಡಿಯುವುದೊಂದೇ ನೀರು, ಸುಡುವಗ್ನಿ ಒಂದೇ ಇರುತಿರಲು ನಡುವೆ ಕುಲಗೋತ್ರ ಎತ್ತಣದು" ಎಂಬ ಸರ್ವಜ್ಞನ ಪ್ರಶ್ನೆ, "ಕುಲಕುಲಕುಲವೆಂದು ಹೊಡೆದಾಡದಿರಿ" ಎಂಬ ದಾಸರ ನುಡಿಗಳಿಗೂ ಕಿವಿಗೊಡದ ಯಥಾಸ್ಥಿತಿವಾದಿಗಳಿಗೆ ಎಚ್ಚರಿಸಲು ಮುಂದಾದವರು ದಲಿತ ಕವಿಗಳು. ದಲಿತ ಕವಿಯೆಂದೇ ಹೆಸರಾದ ಸಿದ್ಧಲಿಂಗಯ್ಯನವರು ತಮ್ಮ "ಹೊಲೆಮಾದಿಗರ ಹಾಡು" ಎಂಬ ಕವನ ಸಂಕಲನದ ಮೂಲಕ ಭಾರತೀಯ ಸಾಮಾಜಿಕ ವ್ಯವಸ್ಥೆಗೆ ಚುಚ್ಚಿ ಎಚ್ಚರಿಸಲು ಪ್ರಯತ್ನಿಸಿದರು. ದಲಿತ ಸಾಹಿತ್ಯವನ್ನು ಇಂದಿನವರೆಗೂ ಏಕಮುಖವಾಗಿ ಅಧ್ಯಯನಕೊಳಪಡಿಸಲಾಗಿದೆ ಎಂಬ ಅಪವಾದವು ಇದೆ. ಪ್ರಸ್ತುತ ಲೇಖನದಲ್ಲಿ ಡಿ.ಎಸ್. ವೀರಯ್ಯ ಅವರ ಕಾವ್ಯಗಳಲ್ಲಿ ಸಾಮಾಜಿಕ ಸಮಸ್ಯೆಗಳ ಪರಿಹಾರ ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ, ಡಿ.ಎಸ್.ವೀರಯ್ಯ, ಕನ್ನಡ ಕಾವ್ಯಗಳು, ಸಾಮಾಜಿಕ ಸಮಸ್ಯೆಗಳು, ಪರಿಹಾರ.*

## ಪೀಠಿಕೆ

ದಲಿತರು ಬರೆದ ಕಾವ್ಯ ಎಂದಾಕ್ಷಣ ಅದು ದಲಿತರ, ತುಳಿತಕ್ಕೆ ಒಳಗಾದವರ ಶೋಷಣೆಗೆ ಒಳಗಾದವರ, ನೋವು-ಯಾತನೆ ನಲಿವುಗಳು ಮತ್ತು ದಲಿತರ ಬದುಕಿನ ಜೀವನದ ಅನುಭವಗಳೇ ಕಾವ್ಯದಲ್ಲಿ ವ್ಯಕ್ತವಾಗಿರುತ್ತವೆ ಎಂದು ಮೇಲ್ಜಾತಿಯವರ ಗ್ರಹಿಕೆಯಾಗಿದೆ. ಆದರೆ ಕವಿಯ ಜಾತಿಯನ್ನು ನೋಡದೆ ಅವರು ರಚಿಸಿದ ಕಾವ್ಯವನ್ನು ಸಮಾನ ಮನಸ್ಸಿನಿಂದ ಕಾವ್ಯದ ಒಳಹೊಕ್ಕು ನೋಡಿದರೆ ಅನೇಕ ವೈಚಾರಿಕ ಚಿಂತನೆಗಳು, ಸೈದ್ಧಾಂತಿಕ ನಿಲುವುಗಳು, ತಾತ್ವಿಕ ಆಲೋಚನೆಗಳು ದಲಿತ ಕಾವ್ಯದಲ್ಲಿ ಅಂತರ್ಗತವಾಗಿರುವುದನ್ನು ಕಾಣಬಹುದು. ಈ ಬಗೆಯಲ್ಲಿ ಅಭಿವ್ಯಕ್ತವಾದ ಮೌಢ್ಯ ಮತ್ತು ಮೌಲ್ಯಗಳ ಚಿಂತನೆಗಳನ್ನು ಡಿ.ಎಸ್ ವೀರಯ್ಯ ಅವರ ಕಾವ್ಯಗಳಲ್ಲಿ ಗಮನಿಸಬಹುದು.

ಡಿ.ಎಸ್. ವೀರಯ್ಯ ಅವರು 'ಗೆರೆಗಳು' ಎಂಬ ಕವನ ಸಂಕಲನ ಪ್ರಕಟಿಸುವ ಮೂಲಕ ಕವಿಯಾಗಿ ಹೊರಹೊಮ್ಮಿದರು. ಈ ಕವನ ಸಂಕಲನವು ಒಟ್ಟು 30 ಕವನಗಳಿಂದ ಕೂಡಿದ್ದು, ನಾಲ್ಕು ಮರುಮುದ್ರಣ ಕಂಡ ಕೃತಿಯಾಗಿದೆ. ಈ ಸಂಕಲನದ ಮುನ್ನುಡಿಯಲ್ಲಿ ಬರಗೂರು ರಾಮಚಂದ್ರಪ್ಪನವರು "ಈ ಸಂಕಲನದ ಉದ್ದಕ್ಕೂ ಉತ್ತಮ ಬದುಕಿನ ನಿರೀಕ್ಷೆಯಲ್ಲಿ, ನೋವಿನಲ್ಲಿ, ಹುಟ್ಟು ಸಾವಿನ ಅರ್ಥ

***Please cite this article as:*** ರೇಷ್ಮಾವತಿ ರಾಮಚಂದ್ರ. (2024). ಡಿ.ಎಸ್. ವೀರಯ್ಯ ಅವರ ಕಾವ್ಯಗಳಲ್ಲಿ ಸಾಮಾಜಿಕ ಸಮಸ್ಯೆಗಳ ಪರಿಹಾರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 98–102

ಹುಡುಕುವ ಸೂಚನೆಗಳು ಸಿಗುತ್ತವೆ. ಇಂಥ ಸೂಚನೆಗಳಲ್ಲಿ ಸೇರಿಹೋದ ಆಶಯ ಕೆಲವೊಮ್ಮೆ ಹೇಳಿಕೆಯಾಗಿ, ಕೆಲವೊಮ್ಮೆ ಕವಿತೆಯ ಸಾಲುಗಳಾಗಿ ಕಾಣಿಸಿಕೊಳ್ಳುತ್ತದೆ" ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇದನ್ನು ಗಮನಿಸಿದರೆ ಈ ಸಂಕಲನದ ಕವಿತೆಗಳಲ್ಲಿ ವಾಸ್ತವಿಕ ಜೀವನದ ಜೊತೆಗೆ ಭಾರತೀಯ ಜೀವನ ವಿಧಾನಗಳ ಕುರಿತು ಚರ್ಚಿಸುತ್ತಾರೆ. ಸಮಕಾಲೀನ ವ್ಯವಸ್ಥೆಯ ವೈರುಧ್ಯವನ್ನು ಅಭಿವ್ಯಕ್ತಿಸುತ್ತಾರೆ. ಅವರೆ ಹೆಳುವಂತೆ "ಇಲ್ಲಿಯ ಕವನಗಳ ವಸ್ತುಗಳು ಬಹುಪಾಲು ಇಂದಿನ ವ್ಯವಸ್ಥೆಯ ಬೆನ್ನಿನ ಅಂಕು ಡೊಂಕುಗಳನ್ನು ಜನಮನಗಳಲ್ಲಿ ಬಿತ್ತಿ ಎಲ್ಲಾ ಜಾತಿ–ಧರ್ಮಗಳನ್ನೂ ಮೀರಿ ಮಾನವ ಧರ್ಮದ ದಿಂಗತದ ಕಡೆಗೆ ಎಲ್ಲವನ್ನೂ ಸೆಳೆವ ದೃಷ್ಟಿಕೋನ ಉಳ್ಳದ್ದಾಗಿರುತ್ತದೆ".[1] ಎಂದು ಹೇಳಿರುವುದು ನೋಡಿದರೆ ಈ ಸಂಕಲನ ಹೊಂದಿರುವ ಕಾವ್ಯಸಾರವನ್ನು ತಿಳಿವುದು.

ಪ್ರತಿಯೊಬ್ಬ ಕವಿ ಹೊಸದಾದೊಂದನ್ನು ಮಾಡಲು ಹೊರಟಾಗ ಅವನು ಮುಖ್ಯವಾಗಿ ತನ್ನದೇಯಾದ ಒಂದು ಶೈಲಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಅದು ಭಾವನೆ, ಭಾಷೆ, ವಸ್ತು, ವಿಷಯ ಹೀಗೆ ಯಾವ ವಿಧದಲ್ಲಾದರು ಸರಿ. ಹಾಗೆ ಡಿ.ಎಸ್.ವೀರಯ್ಯ ಅವರು ಸಹ ಓದುಗರ ಮನಸ್ಸನ್ನು ಅಗೆಯುವ ಹಂಬಲ ಉಳ್ಳವರು. "ಒಳಗಿನ ಸೂಕ್ಷ್ಮವನ್ನು ನೋಡಿಕೊಳ್ಳದವನು ಹೊರಗಿನ ಸತ್ಯವನ್ನು ಸಮರ್ಪಕವಾಗಿ ಗ್ರಹಿಸಲಾರ"[2] ಎಂಬ ತತ್ವ ಸಿದ್ಧಾಂತ ಇವರದು.

ಧಾರ್ಮಿಕ ಕೇಂದ್ರಗಳು ಕೆಳವರ್ಗದವರನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳುತ್ತದೆ ಎನ್ನುವುದನ್ನು ಡಿ.ಎಸ್.ವೀರಯ್ಯ ಅವರು ತಮ್ಮ ಕಾವ್ಯದಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ.

*'ಗುಡಿಗೋಪುರ ಕಟ್ಟಿದೋರು*
*ವಿಗ್ರಹಳ ಕೆತ್ತಿದೋರು*
*ಚಿತ್ರಕಲೆಯ ಬಿಡಿಸಿದವರು*
*ನಾವಲ್ಲವೇ–ನಮ್ಮ ಜನರಲ್ಲವೇ'*[3]

ಈ ಸಾಲುಗಳು ಈಡೀ ಧಾರ್ಮಿಕ ಕೇಂದ್ರಗಳ ಕುರಿತು ಪ್ರಸ್ತಾಪಿಸುತ್ತದೆ. ಗುಡಿಗೋಪುಗಳನ್ನು ಕಟ್ಟುವವರು ದಲಿತರು. ಗುಡಿ ನಿರ್ಮಾಣವಾದ ನಂತರ ಅದೇ ಜನರನ್ನು ಗುಡಿಪ್ರವೇಶ ನಿರ್ಬಂಧಿಸುವ ವೈಧಿಕಶಾಹಿ ವ್ಯವಸ್ಥೆಯನ್ನು ಪ್ರಸ್ತಾಪಿಸುತ್ತಾರೆ. ಅನಾದಿಕಾಲದಿಂದಲೂ ಕೆಳಜಾತಿಯವರು ನಿರ್ಮಿಸಿದ ಗೋಪುರನ್ನು ಬಳಸಿ ಸುಖಕರ ಜೀವನವನ್ನು ನಡೆಸುವ ಜಾತಿವಾದಿಗಳನ್ನು ಕವಿಗಳು ವಿಡಂಭಿಸುತ್ತಾರೆ. ಮೌಢ್ಯದ ಹೆಸರಿನಲ್ಲಿ ಕಲ್ಲಿನ ಮಣ್ಣಿನ ದೇವರುಗಳನ್ನು ನಿರ್ಮಿಸಿ ಮನುಷ್ಯ ಮನುಷ್ಯರಲ್ಲೇ ಭಿನ್ನ ಭಾವಗಳನ್ನು ಹುಟ್ಟುಹಾಕಿದ ವೈಧಿಕಶಾಹಿಯು ಯಾರು ದೇವರ ಮೂರ್ತಿಯನ್ನು ಕೆತ್ತಿದ್ದಾನೆ ಅವನನ್ನೇ ದೇವರ ಗುಡಿಯಲ್ಲಿ ಪ್ರವೇಶ ನಿರಕರಿಸಲಾಗುತ್ತದೆ ಎಂದರೆ ಎಂತಹ ವಿಪರ್ಯಾಸ. ಎನ್ನುತ್ತಾರೆ ಕವಿಗಳು. ಮುಂದುವರೆದು,

*'ಭೂಮಿಯನ್ನು ಉತ್ತಿದೋರು,*
*ಬೀಜವನ್ನು ಬಿತ್ತಿದೋರು,*
*ಬೆಳೆಯನ್ನು ತೆಗೆದೋರು,*
*ನಾವಲ್ಲವೇ–ನಮ್ಮ ಜನರಲ್ಲವೇ,'*[4]

ಎಂದು ಪ್ರಶ್ನಿಸುತ್ತಾರೆ. ಅನ್ನ ಬೆಳೆದವರು ನಾವು, ಕೆರೆ ಕೊಳಗಳ ಕಟ್ಟಿದೋರು, ಬೆವರ ಹನಿಯನ್ನು ಸುರಿಸಿದವರು, ಮಹಡಿ ಮಹಲುಗಳನ್ನು ನಿರ್ಮಿಸುವ ಮೂಲಕ ನೆಮ್ಮದಿಯ ಬದುಕನ್ನು ನೀಡಿದವರು ನಾವು ಶ್ರಮ ಜೀವಿಗಳು. ಇಷ್ಟೆಲ್ಲ ಮಾಡಿದ ನಮಗೆ ನೀವು ಏನು ಮಾಡಿದಿರಿ? ಎಂದು ಕೇಳುವ ರೀತಿ ಹೀಗಿದೆ,

*'ನಮ್ಮ ಗುಡಿಗೆ ಸೇರಿಸದವರು*
*ದೂರದಲ್ಲೇ ನಿಲ್ಲಿಸಿದವರು*
*ಕುಡಿವ ನೀರ ಬಿಡದವರು*
*ನೀವಲ್ಲವೇ–ನಿಮ್ಮ ಜನರಲ್ಲವೇ'*[5]

ಜನಸಾಮಾನ್ಯರನ್ನು ದೇವರು, ಧರ್ಮ, ಶಾಸ್ತ್ರಪುರಾಣಗಳ ಹೆಸರಿನ ಮೇಲೆ ಶತಶತಮಾನಗಳಿಂದ ಶ್ರಮಿಕ ಸಮುದಾಯವನ್ನು

ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ಶೋಷಿಸುತ್ತಾ ಬಂದಿವೆ. ಶಾಸ್ತ್ರ ಪುರಾಣಗಳ ಮೂಲಕ ಜನರನ್ನು ಬೌದ್ಧಿಕ ದಿವಾಳಿಯಾಗಿಸಿಕಂಡು ಬಂದಿರುವ ವೈಧಿಕರು ಮೋಸದ ಜಾಲವನ್ನು ಬಹಿರಂಗ ಪಡಿಸುತ್ತಾರೆ. ಆ ಮೂಲಕ ದಲಿತರು,

***'ಸಿಡಿದೆದ್ದು ನಿಂತವರು***
***ಪ್ರತಿಭಟನೆಗೆ ನಿಂತವರು***
***ಸೇಡಿಗಾಗಿ ತುಡಿದವರು***
***ನಾವಲ್ಲವೇ-ನಾವು ನೀವಾಗೆವೇ'*** [6]

ಎಂದು ಎಚ್ಚರಿಕೆ ನೀಡುವ ಮೂಲಕ ಮೌಢ್ಯವನ್ನು ದಿಕ್ಕರಿಸಿ ವೈಚಾರಿಕತೆಯನ್ನು ಡಿ.ಎಸ್. ವೀರಯ್ಯ ಅವರ ನಾವೂ-ನೀವೂ ಕಾವ್ಯ ಅಭಿವ್ಯಕ್ತಿಸಿದೆ.

ಭಾರತೀಯ ಸಂಪ್ರದಾಯ ವ್ಯವಸ್ಥೆಯಲ್ಲಿ ದೇವರನ್ನು ವ್ಯಾಪಾರ ವ್ಯವಹಾರದ ಸರಕ್ಕಾಗಿ ಬಳಸುವುದೇ ಹೆಚ್ಚಾಗಿದೆ. ದೇವರು ಎಂದರೆ ಯಾರು? ಅವನೆಲ್ಲಿರುವನು? ಅವನ ಬಣ್ಣ ಯಾವುದು ಎಂದು ಪ್ರಶ್ನಿದರೆ ಮೂರ್ಖ, ಪಾಖಂಡಿ ಎಂದು ದೂರುವ ಜನರೇ ಹೆಚ್ಚು. ಏಕೆಂದರೆ ದೇವರನ್ನು ಧರ್ಮವನ್ನು ಜನರ ಮನಸಲ್ಲಿ ಆಳವಾಗಿ ಬೇರುರಿಸಿದ್ದ ವೈಧಿಕರು ಅದನ್ನೇ ತಮ್ಮ ಬಂಡವಾಳವಾಗಿಸಿಕೊಂಡಿದ್ದಾರೆ. ದೇವರು ಎಲ್ಲಿದ್ದಾನೆ ಎಂದು ಪ್ರಶ್ನಿಸಿದರೆ ಮಠಾಧೀಶರ ಮಂಟಪಗಳ ಕಡೆಗೋ, ದೇವಸ್ಥಾನದ ಕಡೆಗೋ ಕೈ ಮಾಡುವವರು. ಇಂತಹ ಗರ್ಭಗುಡಿಯಲ್ಲಿ, ಮಹಲುಗಳಲ್ಲಿ ವಾಸವಾಗುವ ದೇವರಿಗೆ ಕಸದ ಗುಂಡಿಯಲ್ಲಿ ಹಸಿವಿನಿಂದ ಎಂಜಲು ಆಹಾರ ತಿನ್ನುವ ಬಡಪಾಯಿಗಳು ಆ ದೇವರಿಗೆ ಕಾಣುವುದಿಲ್ಲವೇ? ಹೀಗೆ ಹಳಸಿದ ಎಂಜಲುಂಡು ಬೆಳೆದ ಹೆಣ್ಣನ್ನು ಕಾಮದ ಆಹಾರವಾಗಿಸುವ ಸೊಕ್ಕಿದ ಹೋರಿಗಳು ದೇವರಿಗೆ ಕಾಣದಾದರೆ ಇಂತಹ ಕಣ್ಣು ಕಾಣದ ದೇವರು ನಮಗೆ ಬೇಡವೆಂದ ಕವಿಗಳು,

***'ಎದ್ದು ಬಾ,***
***ಗೆಳೆಯಾ***
***ಮುಗ್ಧತೆಯ ಕಾಡಿನಿಂದ ಎದ್ದು ಬಾ***

ಎಂದು ಕರೆಕೊಡುತ್ತಾರೆ.

***ಇಲ್ಲದ ದೇವರಿಗೆ***
***ಸಾಕು ನಮಸ್ಕಾರ***
***ನಿನ್ನ ಆತ್ಮಸಾಕ್ಷಿಯ ಬಡಿದೆಬ್ಬಿಸಿ***
***ಸ್ವಾಭಿಮಾನಕೆ ಹಾಕು***
***ತುರಾಯಿಯ ಹಾರ,'*** [7]

ಎನ್ನುವಲ್ಲಿ ಶೋಷಿತ ಸಮುದಾಯವು ಅನಾದಿ ಕಾಲದಿಂದಲೂ ದೇವರು ದಿಂಡಿರುಗಳ ಹೆಸರಿನಲ್ಲಿ ಒಂದಿಲ್ಲ ಒಂದು ಶೋಷಣೆಗೆ ಅವಮಾನಕ್ಕೆ ಅನ್ಯಾಯಕ್ಕೆ ಒಳಗಾಗುತ್ತಲೇ ಬಂದಿರುವುದನ್ನು ವ್ಯಕ್ತಪಡಿಸುತ್ತದೆ. ಸಾವಿರಾರು ವರ್ಷಗಳಿಂದ ಈ ಸಮುದಾಯ ಮೌನದಿಂದಲೇ ಎಲ್ಲವನ್ನು ಸಹಿಸಿಕೊಂಡು ಬಂದಿದೆ ಇನ್ನೂ ಸಾಕು, ನಾವು ಮನುಷ್ಯರು ನಮಗೂ ಆತ್ಮಸಾಕ್ಷಿ ಇದೆ, ಎಂಬ ಅರಿವನ್ನು ಪಡೆದ ಶೋಷಿತ ಸಮಾಜ ಸ್ವಾಭಿಮಾನದಿಂದ ಬದುಕಲು ಮುಂದಾಗುವಂತೆ ಕವಿಗಳು ಕರೆನೀಡುತ್ತಾರೆ.

ಪುರಾಣಗಳು ಎಂಬ ಕವಿತೆಯಲ್ಲಿ ವರ್ಣಾಶ್ರಮ ಪದ್ಧತಿಯನ್ನು ಪ್ರಶ್ನಿಸುತ್ತಾರೆ. ಮನುಧರ್ಮಶಾಸ್ತ್ರದ ಚಾತುರ್ವರ್ಣ ಪದ್ಧತಿಯು ಮನುಷ್ಯರಲ್ಲಿ ಒಡೆದು ಆಳುವ ನೀತಿಯನ್ನು ಚಾಲನೆಗೆ ತಂದಿತು. ಮನುಷ್ಯ ಮನುಷ್ಯರಲ್ಲೇ ಭಿನ್ನ ಬೇಧಗಳನ್ನು ಸೃಷ್ಟಿಮಾಡಿ ಅವರಲೇ ನಾಲ್ಕು ವರ್ಣಗಳಾಗಿ ವಿಭಾಗಿಸಿದ ಮನು, ಮುಖದಿಂದ, ಭುಜದಿಂದ, ಹೊಟ್ಟೆಯಿಂದ, ಪಾದಿಂದ ಹೀಗೆ ಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ವಿಭಾಗಿಸಿದ ಅವನು ಹುಟ್ಟು ಎಲ್ಲಿಂದ ಆಯಿತು ಎಂದು ಪ್ರಶ್ನಿಸುತ್ತಾರೆ. ಪುರಾಣ ಮೂಲದ ಕಥೆಗಳಲ್ಲಿ ಬರುವ ನಾಯಕ ನಾಯಕಿ ಪಾತ್ರಧಾರಿಗಳ ಹುಟ್ಟು ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗಿದೆ. ಈ ಭೂಮಿ ಮೇಲೆ ಗಂಡು ಮತ್ತು ಹೆಣ್ಣಿನ ಮಿಲನದಿಂದ ಮಾತ್ರ ಮನುಷ್ಯ ಜೀವ ಜನಿಸಲು

ಸಾಧ್ಯವೆಂದು ಅರಿಯದ ಮನುಷ್ಯ ಇಂದಿಗೂ ಭೂಮಿಯಿಂದ ಸೀತೆ, ಕಿವಿಯಿಂದ ಕರ್ಣ ಜನಿಸಿದ ಎಂದು ನಂಬುವ ಜನರನ್ನು ಕಂಡ ಕವಿಗಳು ಈ ಪುರಾಣ ಕಥೆಗಳನ್ನು ನಂಬಿದವರಿಗೆ 'ಪುರಾಣಗಳ ಬೊಗಳುವವನ ಹುಟ್ಟು ಎಲ್ಲಿಂದ? ಎಂದು ಪ್ರಶ್ನಿಸುವ ಮೂಲಕ ವೈಧಿಕಶಾಹಿಯ ಮನೋಧೋರಣೆಗೆ ಪೆಟ್ಟನ್ನು ನೀಡುತ್ತಾರೆ.

'ಎಲ್ಲಮ್ಮನ ಬೆತ್ತಲೆ ಜಾತ್ರೆ' ಎಂಬ ಕವನದಲ್ಲಿ ಅಮಾನವೀಯ ಆಚರಣೆಯಾದ ಸವದತ್ತಿಯ ಎಲ್ಲಮ್ಮ ದೇವದಾಸಿಯರು ಬೆತ್ತಲಾದ ಸ್ಥಿಯನ್ನು ಧಿಕ್ಕರಿಸುವ ಮೂಲಕ ಅಂತಹ ನೀಚ ಆಚರಣೆಗೆ ಕಾರಣವಾದ ಎಲ್ಲಮ್ಮನನ್ನೇ ವಿಡಂಬಿಸುವ ಕಾವ್ಯ ಇಂತಿದೆ,

*'ಬೆತ್ತಲಾದ ಬಡ ಹೆಣ್ಣುಗಳ*
*ಕುಂದಿದೆದೆಯ*
*ಆಳ ಹೊಟ್ಟೆಯ*
*ಬತ್ತಿದ ತೊಡೆಯ*
*ಸಪೂರ ದೇಹವ*
*ನೀನೂ ನೋಡಿದೆ; ನಿನ್ನವರಿಗೂ ತೋರಿಸಿದೆ.'* [8]

ಎಂದು ಎಲ್ಲಮ್ಮನನ್ನು ವಿಡಂಬಿಸುತ್ತಾರೆ. ವೈಧಿಕರು ತಮ್ಮ ಕಾಮತೃಷೆಯನ್ನು ನಿಗಿಕೊಳ್ಳಲು ದಲಿತ ಮಹಿಳೆಯರನ್ನು ಗುರಿಯಾಗಿಸಿಕೊಂಡು ದೇವದಾಸಿ ಎಂಬ ಅನಿಷ್ಟ ಪದ್ದತಿಯನ್ನು ಸೃಷ್ಟಿಸಿಕೊಂಡರು. ಈ ದೇವರಿಗೆ ದಾಸಿಯರಾಗಿ ಬಡ ಹೆಣ್ಣುಮಕ್ಕಳೆ ಬೇಕು, ಅದರಲ್ಲಿಯೂ ದಲಿತ ಸಮುದಾಯದ ಮಹಿಳೆಯರೇ ಇಂತಹ ಅನಿಷ್ಟ ಪದ್ದತಿಗೆ ಬಲಿಯಾದವರು. ಹದಿಹರೆಯದ ತಾರುಣ್ಯ ವಯಸ್ಸಿನಲ್ಲಿ ಹೆಣ್ಣನು ದೇವರ ಹೆಸನಲ್ಲಿ ಮೋಹಿಸಿ ತಮ್ಮ ಕಾಮತೃಷೆಯನ್ನು ನೀಗಿಸಿಕೊಂಡು ತಿಂದ ಬಾಳೆ ಸಿಪ್ಪೆಯಂತೆ ಬಿಸಾಡಲಾಗುತ್ತದೆ. ಮಹಿಳೆಯ ದೇಹದ ಸೌಂದರ್ಯ ಕುಂದಿ ಚರ್ಮ ಸುಕ್ಕುಗಟ್ಟಿದಾಗ ಅವಳನ್ನು ಸಮಾಜದಲ್ಲಿ ಅವಮಾನದ ಬದುಕಿಗೆ ದೂಡಲಾಗುತ್ತದೆ. ಇಂತಹ ಅವಮಾನಕರ ಬದುಕನ್ನು ಬಾಳುವ ದಲಿತ ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ದೇವರು ದೈವಗಳ ಹೆಸರಿನಲ್ಲಿ ನಡೆಯುವ ಅನಿಷ್ಟ ಪದ್ದತಿಗಳನ್ನು ವಿರೋಧಿಸುವಂತೆ ಕರೆ ನೀಡುತ್ತಾರೆ.

ದೇವದಾಸಿ ಸಮುದಾಯವು ಪಾರಂಪರಿಕವಾಗಿ ನಂಬಿಕೊಂಡು ಬಂದಿದ್ದ ದೇವರನ್ನೇ ಇಲ್ಲಿ ಕವಿಗಳು ಪ್ರಶ್ನಿಸುವ ಜೊತೆಗೆ ನನ್ನ ಈ ಸ್ಥಿತಿಗೆ ಕಾರಣವಾದ ದೈವದ ಎದುರು ಬಂಡಾಯವೇಳುವ ಪರಿ,

*'ಆರಡಿ ಎತ್ತರ ನೂರಿಪ್ಪತ್ತು ಕೇಜಿ ತೂಕದ*
*ಮೀಸೆಯ ದಂಡಿನ*
*ತುಂಬಿದ ದೇಹದ*
*ತೊಡೆಯದಡಿಯ*
*ಹೊತ್ತು ಬೆತ್ತಲೆಯೇ*
*ಬರುತ್ತಿಹೆವು;*
*ನಾವು ನಮ್ಮ ನಮ್ಮವರು.*
*ಆದ-ನೀನೂ ನೋಡೆ*
*ನೋಡುವವರಿಗೆಲ್ಲಾ ನೋಡಿಸೆ*
*ನಿನ್ನ ಜಾತ್ರೆಯ ಮಾಡಿಕೊಳ್ಳೇ.'* [9]

ಈ ಕಾವ್ಯವು ನಾಡಿನ ಅನಿಷ್ಟ ಅಮಾನವೀಯ ಆಚರಣೆಯಾದ ದೇವದಾಸಿ ಪದ್ಧತಿಗೆ ಸಿಲುಕಿದ ಮಹಿಳಾ ಸಮುದಾಯದ ಆಕ್ರಂದನದ ನುಡಿಗಳೆ ಆಗಿವೇ. ಆ ಮೂಲಕ ಇಂತಹ ನೀಚ, ನಿಕೃಷ್ಟ ಮೃಗೀಯ ಪದ್ಧತಿಗೆ ಕಾರಣವಾದ ಶೋಷಕ ಸಮುದಾಯದ ಪೋಷಕಳಾದ ಎಲ್ಲಮ್ಮನನ್ನು ಧಿಕ್ಕರಿಸಿ ವೈಚಾರಿಕ ಮನೋಭಾವ ಬೆಳೆಸಿಕೊಳ್ಳುವುದರ ಕಡೆಗೆ ನನ್ನ ಸಮುದಾಯದ ನಡೆ ಎನ್ನುವ ಮಾತು ಧ್ವನಿಸುತ್ತದೆ. ಮೌಢ್ಯವನ್ನು ನಿರಾಕರಿಸುವ ವೈಚಾರಿಕತೆ ಬೆಳೆಸಿಕೊಳ್ಳುವಂತಹ ಅನೇಕ ವಿಚಾರಗಳು ಡಿ.ಎಸ್. ವೀರಯ್ಯ ಅವರ ಕಾವ್ಯಗಳಲ್ಲಿ ಒಡಮೂಡಿವೆ.

ಭಾರತೀಯ ಪರಂಪರೆಯಲ್ಲಿ ವೈದಿಕ ವ್ಯವಸ್ಥೆ ದಲಿತರನ್ನು ಕಾಲಾಂತದಿಂದ ಹೇಗೆ ನಿಕೃಷ್ಟವಾಗಿ ನಡೆಸಿಕೊಂಡಿತೋ ಅಂತೆಯೇ ಸ್ತ್ರೀಯನ್ನು ಹಾಗೇಯೇ ಪರಿಗಣಿಸಿತ್ತು. ಒಂದೆಡೆ ಹೆಣ್ಣನ್ನು ಪೂಜಿಸಿ ಗೌರವಿಸುವಲ್ಲಿ ದೇವರು ವಾಸಿಸುತ್ತಾನೆ

ಎಂದು, ಇನ್ನೊಂದೆಡೆ ಹೆಣ್ಣಿಗೆ ಸ್ವಾತಂತ್ರ್ಯವಿಲ್ಲ ಎಂದು ಕರಾರು ಹಾಕಿ ನಡೆಸಿಕೊಂಡು ಬಂದ ಮನುಸ್ಮೃತಿಯನ್ನು ಕುರಿತು ಡಿ.ಎಸ್. ವೀರಯ್ಯ ಅವರು 'ವಿಷವರ್ತುಲ' ಎಂಬ ಕವಿತೆಯಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ,

> ***'ಮನುಸ್ಮೃತಿ ನಾಲ್ಕು ಹೆಡೆಗಳ ನಾಗರಾಜ***
> ***ಕಾರ್ಕೋಟಕ ವಿಷವ ನಾಲ್ದೆಸೆಗೂ ಕಕ್ಕುವ***
> ***ಮಾನವ ಧರ್ಮವ ಕೊಲ್ಲಲು***
> ***ಸಂಚು ಹಾಕಿರುವನೇ?*** [10]

ಎಂದು ಪ್ರಶ್ನಿಸುವ ಕವಿಗಳು ಮನುಸ್ಮೃತಿಯ ಕರಾಳ ಮುಖವನ್ನು ಅನಾವರಣ ಮಾಡುತ್ತಾರೆ. ಭಾರತದಲ್ಲಿ ಬೌದ್ಧ ಧರ್ಮದ ಕೊನೆಯ ಅರಸ ಬೃಹದ್ರಥ ಮೌರ್ಯನ ಹತ್ಯೆಯ ನಂತರ ಪುಷ್ಯಮಿತ್ರ ಶುಂಗನ, ಶುಂಗ ಸಾಮ್ರಾಜ್ಯ ಸ್ಥಾಪಿಸಿ ಆಡಳಿತಕ್ಕೆ ಬರುತ್ತಾನೆ. ನಂತರ ಸಮಾಜವನ್ನು ನಾಲ್ಕು ವರ್ಣಗಳಲ್ಲಿ ವಿಂಗಡಿಸಿ, ಮನುಷ್ಯ ಮನುಷ್ಯರಲ್ಲೇ ಭಿನ್ನ ಭಾವ, ಮೇಲು ಕೀಳುಗಳು ಭಾವನೆಗಳನ್ನು ತುಂಬುವ ಮೂಲಕ ಸಮಾಜದ ಒಂದು ವರ್ಗವನ್ನು ಶ್ರೇಷ್ಠ ಇನೊಂದು ವರ್ಗ ಕನಿಷ್ಟ ಎಂದು ವಿಭಾಗಿಸಿ ತನಗಾದವರನ್ನು ಆಲಂಗಿಸಿ, ಆಗದವರನ್ನು ಅಂಗಾಲಿನಡಿ ತುಳಿದು, ಜಾತಿ–ಜಾತಿಯ ನಡುವೆ ಕಂದಕ ನಿರ್ಮಿಸಿದನು. ಬ್ರಾಹ್ಮಣರು ಮಾತ್ರ ವಿದ್ಯೆಯನ್ನು ಕಲಿಯಬೇಕು, ಉಳಿದವರು ಅಜ್ಞಾನ ದಾರಿದ್ರ್ಯದಿಂದ ಬಳಲುವಂತೆ ಮಾಡಿ, ಅನ್ಯಾಯ ಅನೈತಿಕತೆಯ ದಂಡವ ಮಾಡಿ, ಮಾನವ ಮೌಲ್ಯವ ಹರಾಜು ಹಾಕಿ ಕೊಳೆತು ನಾರುವ ಸಮಾಜ ನಿರ್ಮಾಣಕ್ಕೆ ಪುಷ್ಟಿಯನ್ನು ನೀಡುವ ಕಾನೂನು ರಚಿಸಿ, ಬಹುಸಂಖ್ಯಾತ ತಳಸಮುದಾಯಕ್ಕೆ ಅನ್ನ, ಅರಿವೆ, ಅರಿವು, ವಸತಿಯಿಂದ ವಂಚಿಸಿ ಅವರ ಜೀವನ ನರಕಸದೃಶ್ಯ ಮಾಡಿದ ಮನುಧರ್ಮದ ಪೋಷಕನೇ ನಿನ್ನ ಹೆಡೆಯನ್ನು ಮುರಿಯುವ, ನಿನ್ನ ಕಾರ್ಕೋಟಕ ವಿಷವ ಕಕ್ಕಿಸುವ ಕಾಲದ ವೀರ ಬರುವನು ಎಂದು ಮನುಸ್ಮೃತಿ ಪಾಲಕ ಪೋಷಕರಿಗೆ ಎಚ್ಚರಿಕೆಯನ್ನು ನೀಡುತ್ತಾರೆ.

ಹೀಗೆ ದೇಶದಲ್ಲಿಯ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಶೈಕ್ಷಣಿಕ ವಿಷಯಗಳೂ ಇಲ್ಲಿ ಎಡೆಪಡೆದಿವೆ. ಕವಿಗಳು ಸಾಮಾಜಿಕ ಅನಿಷ್ಟಗಳಾದ ಜಾತೀಯತೆ, ಮೂಢನಂಬಿಕೆ, ಕಂದಾಚಾರ, ಮುಷ್ಯ ಅಹಮ್ಮಿಕೆ, ದೇವರು, ಧರ್ಮದ ಕುರಿತು ವಿಡಂಬಿಸುವುದನ್ನು ಕಾಣುತ್ತೇವೆ ಅವ್ಯವಸ್ಥೆಯನ್ನು, ವ್ಯವಸ್ಥೆ ಎಂದು ಬಿಂಬಿಸುವ ಹಲವರ ಹುನ್ನಾರಗಳನ್ನು ಕೆಣಕುವ, ಕುಟುಕುವ ಅಂಶಗಳು ಇಲ್ಲಿಯ ಕವಿತೆಗಳಲ್ಲಿ ಒಡಮೂಡಿದ್ದನ್ನು ಅರಿಯಬಹುದು.

### ಕೊನೆಟಿಪ್ಪಣಿಗಳು

1. ವೀರಯ್ಯ, ಡಿ.ಎಸ್. (2020). *ಗೆರೆಗಳು ಕವನಸಂಕಲನ.* ಪುಟ. ಲೇಖಕರ ನುಡಿ
2. ಕಲ್ಯಾಣ ರಾವ ಜಿ. ಪಾಟೀಲ. (ಸಂ.). (2019). *ಕವಿಮಾರ್ಗ.* ಪುಟ. 211
3. ವೀರಯ್ಯ, ಡಿ.ಎಸ್. (2020). *ಪೂರ್ವೋಕ್ತ.* ಪುಟ. 10
4. ಅದೇ. ಪುಟ. 10
5. ಅದೇ. ಪುಟ. 10
6. ಅದೇ. ಪುಟ. 11
7. ಅದೇ. ಪುಟ. 35
8. ಅದೇ. ಪುಟ. 37
9. ಅದೇ. ಪುಟ. 37
10. ಅದೇ. ಪುಟ. 32

### ಪರಾಮರ್ಶನ ಗ್ರಂಥಗಳು


- ಅರ್ಜುನ ಗೊಳಸಂಗಿ. (ಸಂ.) (2009). *ಕಾವ್ಯ ಮಂಥನ : ಪ್ರೊ. ಅರವಿಂದ ಮಾಲಗತ್ತಿ ಅವರ ಕಾವ್ಯದ ವಿಮರ್ಶೆ– ಸಂಪಾದನೆ.* ದಲಿತ ಸಾಹಿತ್ಯ ಪರಿಷತ್ತು.
- ಕಲ್ಯಾಣರಾವ ಜಿ. ಪಾಟೀಲ. (ಸಂ.). (2019). *ಕವಿಮಾರ್ಗ.* ಸಂಪುಟ–13. ಕವಿಮಾರ್ಗ ಪ್ರಕಾಶನ.
- ವೀರಯ್ಯ, ಡಿ.ಎಸ್. (2020). ಗೆರೆಗಳು ಕವನಸಂಕಲನ. ಪಿತಾಮಹ ಪ್ರಕಾಶನ.